47. An amount of Rs.20.00 lakhs has been released to Deputy Commissioner, Tumkur District for development of yourist facilities at Yadiyur in kunigal Taluk.
48. An amount of Rs.25.00 lakhs has been released to Deputy Commissioner, Uttara Kannada District for development of tourist facilities at Tineghat and Castle Rocks in Uttara Kannada district.
49. An amount of Rs.153.42 lakhs has been spent for construction of Toilet and Drinking Water facilities at various tourist places of the state.

ಈ) 2008–09ರ ಅನುದಾನದಲ್ಲಿ ರೂ.118.24ಲಕ್ಷಗಳು ವೆಚ್ಚವಾಗದೆ ಉಳಿತಾಯವಾಗಿರುತ್ತದೆ. ಈ ಉಳಿತಾಯದಲ್ಲಿ ಸಿಬ್ಬಂದಿಗಳ ವೇತನ ಮತ್ತು ಇತರೆ ಭತ್ಯೆಗಳಿಗೆ ಸಂಬಂಧಿಸಿದಂತೆ ರೂ.68.00ಲಕ್ಷಗಳು ಹಾಗೂ ರೂ.50.00ಲಕ್ಷಗಳೂ ಪ್ರಧಾನ ಕಾಮಗಾರಿ ಲೆಕ್ಕ ಶೀರ್ಷಿಕೆಗೆ ಸಂಬಂಧಿಸಿರುತ್ತವೆ.

An amount of Rs.118.241 lakhs has not been spent. Out of this Rs.68.00 lakhs belongs to salaries and other allowances for employees and Rs.50.00 lakhs belongs to major works Head of Accounts.

644 ಶ್ರೀ ಸಂಗಮೇಶ್ವರ ಬಿ.ಕೆ.(ಭದ್ರಾವತಿ) : ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದಾವತಿ ಕ್ಷೇತ್ರದ ಗ್ರಾಮಂತರ ಪ್ರದೇಶದವಾದ ಪುರಾತನವಾದ ಹೊನ್ನಗುಡ್ಡ ಶ್ರೀರಂಗನಾಥ ಸ್ವಾಮಿ ದೇವಸ್ಥಾನ ಹಾಗೂ ನಗರದ ಶ್ರೀ ಲಕ್ಷ್ಮೀರಂಗನಾಥ ಸ್ವಾಮಿ ದೇವಸ್ಥಾನಗಳಿಗೆ ಜಿಲ್ಲೆಯ ಹಾಗೂ ರಾಜ್ಯದ ನಾನಾ ಭಾಗಗಳಿಂದ ಪ್ರವಾಸಿಗರು ಹಾಗೂ ಭಕ್ತಾದಿಗಳು ಬಂದು ಹೋಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು ಹಣ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುವುದೇ;

ಇ) ಭದ್ರಾವತಿ ಕ್ಷೇತ್ರದ ಭದ್ರಾಡ್ಯಾಮನ್ನು ಸಹ ಕೆ.ಆರ್.ಎಸ್ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಯೋಜನೆ ತಯಾರಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಅಭಿವೃದ್ಧಿಪಡಿಸಲು ಕೂಡಲೇ ಕ್ರಮ ಕೈಗೊಳ್ಳ ಲಾಗುವುದೇ?

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) ಹೌದು.

Yes.

ಆ) ಈ ಬಗ್ಗೆ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಸ್ಥಳ ಪರಿಶೀಲನಾ ವರದಿ ತರಿಸಲು ಪತ್ರ ಬರೆಯಲಾಗಿದೆ. ಸಮಿತಿಯಿಂದ ವರದಿ ಬಂದ ನಂತರ ಅಗತ್ಯವಿದ್ದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

District Tourisum Promotion Council has been asked to submit a spot inspection report of these places. After obtaining the report from the committee, if necessary, action will be taken in this regard.

ಇ) ಇಲಾಖೆಯ ಮುಂದೆ ಈ ಪ್ರಸ್ತಾವನೆ ಇರುವುದಿಲ್ಲ.

There is no such proposal in the Department.

ಈ) ಅನ್ವಿಯಿಸುವುದಿಲ್ಲ.

Does not arise.

755 **ಶ್ರೀ. ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು) :** ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ನಕಲಿ ಮದ್ಯಗಳನ್ನು ತಯಾರಿಸಿ ಗ್ರಾಮಗಳಲ್ಲಿ ಮಾರಾಟ ಮಾಡಿ ಬಡ ಕುಟುಂಬ ಹಾಗೂ ಕೂಲಿಕಾರರನ್ನು ಹಾಳು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರ್ಕಾರದಿಂದ ಯಾವುದೇ ಪರವಾನಗಿಯೂ ಇಲ್ಲದೇ ನಕಲಿ ಮದ್ಯ ತಯಾರಿಸಿ ಮಾರಾಟವನ್ನು ಮಾಡುತ್ತಿರುವುದು ಅಬಕಾರಿ ಇಲಾಖೆಯ ಅಧಿಕಾರಿಯವರಿಗೆ ತಿಳಿದಿದ್ದರೂ ಸಹಾ ಇವರು ಶಾಮೀಲಾಗಿರುವುದು ನಿಜವಲ್ಲವೆ;

ಇ) ಈ ನಕಲಿ ಮದ್ಯ ತಯಾರಿಕಾ ಮತ್ತು ಮಾರಾಟಗಾರರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೇ?